ಶ್ರೀ ಕಾಗೋಡು ತಿಮ್ಮಪ್ಪ.—ಕೆಲವು ಮಂತ್ರಿಗಳು ತಿಂಗಳ 15 ರಿಂದ 28ರವರೆಗೆ ಪ್ರವಾಸ ಮಾಡಿದ್ದಾರೆ ಈ ರೀತಿ ಹೆಡ್‌ಕ್ವಾರ್ಟರ್ಸ್ ಬಿಟ್ಟು ಹೊರಗಡೆ ಇದ್ದರೆ, ಇಲ್ಲಿ ಇವರನ್ನು ನೋಡಲು ಬಂದು ಕಾಯುತ್ತಿರುವ ಜನರಿಗೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಯಾವ ಮಂತ್ರಿಯವರು ಸಹ ನಿರ್ದಿಷ್ಟವಾದ ಅವಧಿಗಿಂತ ಹೆಚ್ಚು ಪ್ರವಾಸ ಮಾಡಬಾರದು ಎಂದು ಕಡ್ಡಾಯವಾಗಿ ತಿಳಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನು ಕಡ್ಡಾಯವಾಗಿ ಮಾಡುವುದರಿಂದ ಸಾರ್ವಜನಿಕ ಹಿತದೃಷ್ಟಿಯಿಂದ ಬಹಳ ತೊಂದರೆಯಾಗುತ್ತದೆ. ಉದಾಹರಣೆಗೆ ಒಂದು-ಎರಡು ತಿಂಗಳಿಂದ ಅಸೆಂಬ್ಲಿ ನಡೆಯುತ್ತಿದೆ. ಆದರೆ ಅಲ್ಲಿ ಅನೇಕ ಕೆಲಸಗಳು ಕಾಯ್ದುಕೊಂಡು ಇರುತ್ತದೆ. ಅದನ್ನು ಮೋಗಿ ಮಾಡದಿದ್ದರೆ ಕೆಲಸ ಕುಂಠಿತವಾಗುತ್ತದೆ. ಆದ್ದರಿಂದ ಪರಿಸ್ಥಿತಿಯನ್ನು ನೋಡಿಕೊಂಡು ಮಾಡಬೇಕೇ ವಿನಹ ನಾವು ಅದಕ್ಕೆ ರೂಲ್ಸ್ ಪಾಕಿಕೊಂಡು ಮಾಡುವುದು ಕಷ್ಟವಾಗುತ್ತದೆ.

ಶ್ರೀ ಕೆ. ಎಂ. ನಾಗಣ್ಣ.—ಮಂತ್ರಿಗಳು ಪಕ್ಷದ ಕಾರ್ಯಕ್ರಮಕ್ಕಾಗಲಿ ಅಥವಾ ಪಕ್ಷದ ಗೊಂದಲದ ಕಾರ್ಯಕ್ರಮಕ್ಕಾಗಲಿ ದೆಹಲಿಗೆ ಅಥವಾ ಬೇರೆ ಕಡೆ ಹೋದರೆ, ಅದಕ್ಕೆ ಆದ ಖರ್ಚುಗಳು ಸಹ ಇದರಲ್ಲಿ ಸೇರುತ್ತದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪಕ್ಷದ ಕಾರ್ಯಕ್ರಮಕ್ಕಾಗಲಿ ಅಥವಾ ಸ್ವಂತ ಕಾರ್ಯಕ್ರಮಕ್ಕಾಗಲಿ ಸರ್ಕಾರದ ಹಣವನ್ನು ಉಪಯೋಗ ಮಾಡತಕ್ಕದ್ದು ನಿಷೇಧ. ಅಂಥವುಗಳು ಯಾವುದಾದರೂ ಸರ್ಕಾರದ ಗಮನಕ್ಕೆ ಬಂದರೆ ವಿಚಾರ ಮಾಡುತ್ತೇವೆ.

DEVELOPMENT WORKS IN BANGALORE URBAN DISTRICT

156. Sri K. SRIRAMULU (Gandhinagar).—

Will the Minister for Municipal Administration be pleased to state :—

The allomtent made for the development works, under the following heads, *viz.*, Health, Sanitation, Education, slum clearance, roads, water supply, animal husbandry and co-operation to be carried out in Bangalore Urban District with particular reference to Gandhinagar Constituency for the year 1972-73 ?

Sri B. BASAVALINGAPPA (Minister for Municipal Administration).—

Amount spent during 1972-73 by the Bangalore City Corporation on the following works :

Roads—Rs. 9,91,900

Water Supply—Rs. 7,000

Education—Rs. 2,67,280

Break up figures are not available divisionwise for the following items :

Health

Sanitation

Slum clearance

No expenditure is incurred by the Corporation on items of works relating to Animal Husbandry and Co-operation.

ಶ್ರೀ ಕೆ. ಶ್ರೀರಾಮುಲು.—ಬೆಂಗಳೂರು ನಗರದ ರಸ್ತೆಗಳಿಗೆ ಮತ್ತು ಎಜುಕೇಶನಿಗೋಸ್ಕರ 1972-73ರಲ್ಲಿ 12 ಲಕ್ಷದ 65 ಸಾವಿರ ಖರ್ಚು ಮಾಡಿದ್ದೇವೆಂದು ಹೇಳಿದ್ದೀರಿ. ಬೆಂಗಳೂರು ನಗರದಲ್ಲಿ ಹೆಚ್ಚು ಕಮ್ಮಿ 75 ಕೋಟಿ ರೂಪಾಯಿ ವರಮಾನ ಇದೆ. ಆದ್ದರಿಂದ ನಗರದ ಅಭಿವೃದ್ಧಿಗೆ ಹೆಚ್ಚಾಗಿ ಖರ್ಚು ಮಾಡಿದರೆ ಹೆಚ್ಚು ಉತ್ಪತ್ತಿ ಬರುವುದಿಲ್ಲವೇ ?

†ಶ್ರೀ ಬಿ. ಬಸವಲಿಂಗಪ್ಪ.—ಇದು ಗಾಂಧಿನಗರ ಅಸೆಂಬ್ಲಿ ಕ್ಷೇತ್ರದ ಮಟ್ಟಿಗೆ ಮಾತ್ರ ಅನ್ವಯಿಸುತ್ತದೆ. ಆ ಪ್ರದೇಶಕ್ಕೆ ಸಂಬಂಧಪಟ್ಟ ಫಿಗರ್ಸನ್ನು ನಾವು ಕೊಟ್ಟಿದ್ದೇವೆ. ಪೂರ್ತಿಯಾಗಿ ಇಡೀ ಕಾರ್ಪೊರೇಶನ್‌ಗೆ ಕೇಳಿದರೆ ಅದನ್ನು ಕೊಡಬಹುದು.

ಶ್ರೀ ಕೆ. ಶ್ರೀರಾಮುಲು.—ನನ್ನ ಪ್ರಶ್ನೆಯಲ್ಲಿ ಬೆಂಗಳೂರಿನದ್ದು ಕೇಳಿದ್ದೇನೆ. ಆದರೂ ಗಾಂಧಿನಗರ ಕ್ಷೇತ್ರ ತೀರ ಬಡವರು ಮತ್ತು ಕಾರ್ಮಿಕರು ಇರುವಂತಹ ಕ್ಷೇತ್ರ. ಇಲ್ಲಿ ವರಮಾನ ಬಹಳ ಕಡಿಮೆ ಬರುತ್ತದೆ ಎಂದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಮತ್ತು ಇನ್ನು ಹೆಚ್ಚಿನ ಅಭಿವೃದ್ಧಿ ಇಲ್ಲಿ ಮಾಡಿಸುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಇದು ಬಡವರು ಹೆಚ್ಚಾಗಿ ಇರತಕ್ಕಂತಹ ಕ್ಷೇತ್ರವೆಂದು ಸರ್ಕಾರದ ಗಮನಕ್ಕೆ ಬಂದಿದೆ. ಅದಕ್ಕೆ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಅಲ್ಲಿ ಹಾಕಿಕೊಂಡಿದ್ದೇವೆ. ಆದರಲ್ಲೂ ಸ್ಲಮ್ಸ್ ಕ್ಲಿಯರನ್ಸ್ ಮಾಡಬೇಕೆಂದು ಪ್ರೋಗ್ರಾಂ ಹಾಕಿಕೊಂಡಿದ್ದೇವೆ. ಅದಕ್ಕೆ ನಗರದ ಏಂ.ಎಲ್.ಎ. ಗಳನ್ನು ಎಲ್ಲಾ ಕರೆದುಕೊಂಡು ಹೋಗಿ ಎಲ್ಲೆಲ್ಲಿ ಯಾವ್ಯಾವ ವಿಧವಾದ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಸ್ಥಳ ಪರಿಶೀಲನೆ ಮಾಡಿ ನಿರ್ಣಯ ಮಾಡುತ್ತೇವೆ. ಆದರ ಕಾರ್ಯಕ್ರಮವನ್ನು ತಮಗೆ ಬೇಗನೇ ಕೊಡುತ್ತೇವೆ.

ಶ್ರೀ ಕೆ. ಶ್ರೀರಾಮುಲು.—ಈ ಕ್ಷೇತ್ರದಲ್ಲಿ ಸರ್ಕಾರ ನಡೆಸತಕ್ಕಂತಹ ಒಂದು ಪ್ರೌಢಶಾಲೆಯೂ ಇಲ್ಲ. ಹೀಗಿರುವುದರಿಂದ ಆಲ್ಲಿರುವ ಜನರಿಗೆ ವಿದ್ಯಾಭ್ಯಾಸ ಸೌಕರ್ಯ ಹೇಗೆ ಸಿಗುತ್ತದೆ ಮತ್ತು ಅವರು ಹೇಗೆ ಮುಂದುವರಿಯುತ್ತಾರೆ ? ಆದ್ದರಿಂದ ತೀರಾ ಬಡವರು ಇರುವ ಕಡೆ ವಿದ್ಯಾಭ್ಯಾಸ ಸೌಲಭ್ಯ ಒದಗಿಸುವುದು ಸರ್ಕಾರದ ಕರ್ತವ್ಯವಲ್ಲವೇ ?

ಶ್ರೀ ಬಿ. ಬಸವಲಿಂಗಪ್ಪ.—ಕೊರತೆ ಇದೆಯೆಂದು ಸರ್ಕಾರದ ಗಮನಕ್ಕೆ ಬಂದಿದೆ. ಅದರ ಬಗೆ ಏನು ತೀರ್ಮಾನ ತೆಗೆದುಕೊಳ್ಳಬೇಕೆಂಬುದನ್ನು ಇಷ್ಟರಲ್ಲಿಯೇ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ನಗರದಲ್ಲಿ 15 ಸಾವಿರ ರಾಸುಗಳು ಇದ್ದರೂ ಕಾರ್ಪೊರೇಷನ್‌ನವರು ಕ್ಯಾಟ್ಲ್ ಶೆಡ್‌ಗಳನ್ನು ಕಟ್ಟುವುದಾಗಲಿ, ಕ್ಯಾಟ್ಲ್ ಯಾರ್ಡ್ ಕಟ್ಟುವುದಾಗಲಿ ಏಕೆ ಮಾಡಿಲ್ಲ ? ಅದಕ್ಕೆ ಒಂದು ನಿರ್ದಿಷ್ಟವಾದ ಕಾರ್ಯಕ್ರಮವನ್ನು ಏನಾದರೂ ಹಾಕುವುದಕ್ಕೆ ಯೋಚನೆ ಮಾಡಿದ್ದೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಅನಿಮಲ್ ಹಸ್ಬೆಂಡರಿ ವಿಚಾರದಲ್ಲಿ ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಅದರ ಬಗ್ಗೆ ಮಾನ್ಯ ಚಿಕ್ಕೇಗೌಡರು ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆದರ ಬಗ್ಗೆ ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ ಮಾನ್ಯ ಮಂತ್ರಿಯವರು ಉತ್ತರ ಕೊಡುತ್ತಾರೆ.

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಸದಸ್ಯರು ಕೇಳಿದ ಹಾಗೆ ಕಾರ್ಪೊರೇಶನ್ ಸ್ಥಳವನ್ನು ತೆಗೆದುಕೊಂಡು ಕ್ಯಾಟ್ಲ್ ಮಾರ್ಕೆಟ್ ಮಾಡಬೇಕೆಂದು ಇದೆ. ಅದನ್ನು ಶೀಘ್ರದಲ್ಲಿಯೇ ಮಾಡುತ್ತೇವೆ.

ಶ್ರೀ ಕೆ. ಶ್ರೀರಾಮುಲು.—ಈ ಕ್ಷೇತ್ರಕ್ಕೆ ಸುಮಾರು 45 ವರ್ಷಗಳಿಂದ ರಾಮಚಂದ್ರಪುರ, ಬಿನಿ ಮಿಲ್ ಪ್ರದೇಶ, ಗೋಪಾಲಪುರ ಮತ್ತು ಜಕ್ಕಸಂದ್ರ ಇತ್ಯಾದಿಗಳೆಲ್ಲಾ ಕಾರ್ಪೊರೇಷನ್‌ಗೆ ಸೇರಿರುವುದರಿಂದ, ಇಷ್ಟು ಪ ದೇಶಗಳನ್ನೂ ಸೇರಿಕೊಂಡು ಅಭಿವೃದ್ಧಿಮಾಡುವುದಕ್ಕೆ ಕಾರ್ಪೊರೇಷನ್ನಿನಲ್ಲಿ ಸಾಕಷ್ಟು ಫಂಡ್ಸ್ ಇಲ್ಲವಾದು ದರಿಂದ ಸರ್ಕಾರದವರು ಹೆಚ್ಚು ಹಣವನ್ನು ಒದಗಿಸಿ ಈ ಪ್ರದೇಶವನ್ನು ಅಭಿವೃದ್ಧಿಮಾಡುವುದಕ್ಕೆ ಪ ಯತ್ನ ಮಾಡುವರೇ ?

ಶ್ರೀ ಬಿ. ಬಸವಲಿಂಗಪ್ಪ.—ಆ ಪ್ರದೇಶದ ಅಭಿವೃದ್ಧಿಯನ್ನೂ ಗಮನದಲ್ಲಿಟ್ಟುಕೊಂಡಿದ್ದೇವೆ. ಈಗ ಕಾರ್ಪೊರೇಷನ್‌ನವರು ಮಾಡುವಂತೆ ಮಾಡಲಿ, ಹಾಗೊಂದು ವೇಳೆ ಕೊರತೆ ಇದೆಯೆಂದು ಕಂಡುಬಂದರೆ ನೋಡೋಣ.